ಸಾವಿರ ರೂಪಾಯಿಗಳಿಗೆ ಹೆಚ್ಚಿಸ ಬೇಕೆಂಬ ಒಂದು ತೀರ್ಮಾನವನ್ನು ಮಾಡಿದ್ದೇವೆ. ಅದನ್ನು ವರ್ಕ್‌ಔಟ್ ಕೂಡ ಮಾಡುತ್ತಿದ್ದೇವೆ. ಇದರ ಬಗ್ಗೆ ವಿಸ್ತಾರವಾದ ಹೇಳಿಕೆಯನ್ನು ಕೊಡಲು ತಾವು ಅವಕಾಶ ಮಾಡಿಕೊಡಬೇಕು. ಪ್ರಾಯಶಃ ನಾಳೆ ಅಲ್ಲದಿದ್ದರೆ ಸೋಮವಾರದ ದಿನ ಈ ಬಗ್ಗೆ ಹೇಳಿಕೆ ಕೊಡುತ್ತೇನೆ.

ಶ್ರೀ ಎನ್.ಯೋಗೀಶ್ ಭಟ್: ಇದಕ್ಕೆ ಪರಿಹಾರವೇನೂ ಇಲ್ಲವೇ? ಮಾರಾಟ ತೆರಿಗೆಯಲ್ಲಿ ವಿನಾಯಿತಿ ಕೊಡುವುದು ಸಾಧ್ಯವಿಲ್ಲವೇ?

ಉಪಾಧ್ಯಕ್ಷರು: ನಾಳೆ ಈ ಬಗ್ಗೆ ಸ್ಪಷ್ಟವಾಗಿ ಹೇಳಿಕೆ ಕೊಡುತ್ತೇವೆ ಎಂದು ಸಚಿವರು ಹೇಳಿದ್ದಾರೆ. ಮತ್ತೆ ಏತಕ್ಕೆ ಚರ್ಚೆ ಮಾಡುತ್ತೀರಿ?

**(ಈ) ಪಂಚಾಯತಿಗಳಿಗೆ ಅಧ್ಯಕ್ಷ ಅಥವಾ ಆಡಳಿತಾಧಿಕಾರಿಗಳ ನೇಮಕ**

+ ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಸನ್ಮಾನ್ಯ ಅಧ್ಯಕ್ಷರೆ, ಈ ಹಿಂದೆ ಪಂಚಾಯತಿಗಳಲ್ಲಿದ್ದಂತಹ ಕೆಲವು ಹಳ್ಳಿಗಳನ್ನು ಮುನಿಸಿಪಾಲಿಟಿಗಳಿಗೆ ಸೇರಿಸಿದ ಮೇಲೆ ಪಂಚಾಯತಿಗಳಲ್ಲಿ ಖಾಲಿ ಬಿದ್ದ ಸ್ಥಾನಗಳಿಗೆ ಸರ್ಕಾರ ನಾಮಕರಣ ಸದಸ್ಯರನ್ನು ಭರ್ತಿ ಮಾಡಿದರು. ಆದರೆ ಆ ಪಂಚಾಯಿತಿಗಳಿಗೆ ಈವರೆಗೆ ಅಧ್ಯಕ್ಷರನ್ನಾಗಲಿ ಅಥವಾ ಆಡಳಿತಾಧಿಕಾರಿಗಳನ್ನಾಗಲಿ ನೇಮಕ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಯನ್ನು ಕೇಳಿದರೆ ''ನಾನು ಅಸಹಾಯಕ, ಕಾನೂನುಬದ್ಧವಾಗಿ ಆಡಳಿತಾಧಿಕಾರಿಯನ್ನು ನೇಮಕ ಮಾಡಲು ಸಾಧ್ಯವಿಲ್ಲ'' ಎಂದು ಹೇಳುತ್ತಾರೆ. ಇದರಲ್ಲಿ ಎರಡು ಮೂರು ಪಂಚಾಯಿತಿಗಳು ಇವತ್ತು ಕೆಲಸ ಮಾಡದಂತಹ ಸ್ಥಿತಿಯನ್ನು ತಲುಪಿವೆ. ಆ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ನಾಳೆ ನಾಡಿದ್ದರಲ್ಲಿ ಇದಕ್ಕೆ ಒಂದು ಪರಿಹಾರವನ್ನು ಸೂಚಿಸಬೇಕು. ತಾವು ಏನಾದರೂ ಮಾಡಿ ನಾಳೆ ನಾಡಿದ್ದರಲ್ಲಿ ಇದಕ್ಕೆ ಒಂದು ವ್ಯವಸ್ಥೆ ಮಾಡಿದರೆ ಕನಿಷ್ಠ ಮಾರ್ಚ್ 30ನೇ ತಾರೀಖಿನೊಳಗಾದರೂ ಅವರಿಗೆ ಇರತಕ್ಕಂಥ ಅನುದಾನವನ್ನು ಖರ್ಚು ಮಾಡಿ ಅಲ್ಲಿ ಆಗಬೇಕಾಗಿರುವ ಕೆಲಸವನ್ನು ಮಾಡುವುದಕ್ಕೆ ಅನುವು ಮಾಡಿಕೊಟ್ಟಂತಾಗುತ್ತದೆ ಎಂಬುದಾಗಿ ನಾನು ಅವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ ಇದರಲ್ಲಿ ಪಾರ್ಷಿಕವಾಗಿ ಸತ್ಯ ಇದೆ. ದುಗುಡ ಹಳ್ಳಿ, ಜೋಗಿ ಹಳ್ಳಿ ಗ್ರಾಮ ಪಂಚಾಯತಿಗಳಲ್ಲಿ ಚುನಾಯಿತ ಅಧ್ಯಕ್ಷರು ಇಲ್ಲದೇ ಇರುವುದರಿಂದ ತೊಂದರೆಯಾಗಿದೆ. ಈ ವಿಚಾರ ಹೈಕೋರ್ಟಿನಲ್ಲಿ ಇರುವುದರಿಂದ ಈ ಎರಡೂ ಗ್ರಾಮ ಪಂಚಾಯತಿಗಳಿಗೆ ಒಬ್ಬ ಕಾರ್ಯದರ್ಶಿಯನ್ನು ನೇಮಕಾತಿ ಮಾಡಿದ್ದೇವೆ. ಅವರು ದೈನಂದಿನ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಆಡಳಿತಾಧಿಕಾರಿಯನ್ನು ನೇಮಕ ಮಾಡುವಂತಹ ಅಧಿಕಾರ

ಜಿಲ್ಲಾಧಿಕಾರಿಗಳಿಗೆ ಇದೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಕಳಿಸಿಕೊಟ್ಟಿದ್ದೇವೆ. ಆಡಳಿತಾತ್ಮಕ ಕಾರಣವೋ, ತಾಂತ್ರಿಕ ಕಾರಣವೋ ಗೊತ್ತಿಲ್ಲ ಇಲ್ಲಿಯವರೆಗೆ ಆಗಿಲ್ಲ. ತುಮಕೂರು ಜಿಲ್ಲೆ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ಕಳುಹಿಸಿರತಕ್ಕಂತಹ ಪತ್ರದ ಫ್ಯಾಕ್ಸ್ ಅನ್ನು ನಾನು ತರಿಸಿಕೊಂಡಿದ್ದೇನೆ. ಇನ್ನು 2-3 ದಿವಸದೊಳಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಜಿಲ್ಲಾಧಿಕಾರಿಯವರನ್ನು ನಾನು ಕೇಳಿದ್ದಕ್ಕೆ ಅವರು ಈಗ ಅಮೆಂಡ್‌ಮೆಂಟ್ ಮಾಡಿರುವ ಕಾಯಿದೆ ಪ್ರಕಾರ ಆಡಳಿತಾಧಿಕಾರಿಯನ್ನು ನೇಮಕ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದರು. ಅಲ್ಲಿ ಕಾರ್ಯದರ್ಶಿ ಇದ್ದಾರೆ. ಅಧ್ಯಕ್ಷರ ಚೆಕ್‌ಗೆ ಸಹಿ ಹಾಕದೇ ಹೋದರೆ ಅಲ್ಲಿ ಯಾವುದೇ ಖರ್ಚನ್ನು ಮಾಡುವುದಕ್ಕೆ ಬರುವುದಿಲ್ಲ. ಕಾರ್ಯದರ್ಶಿ ಇರುವುದು ನಿಜ. ಇನ್ನೊಬ್ಬ ಕೌಂಟರ್ ಸಹಿ ಮಾಡುವುದಕ್ಕೆ ಅಧ್ಯಕ್ಷನೋ, ಆಡಳಿತಾಧಿಕಾರಿಯೋ ಬೇಕು. ಇದರಿಂದಾಗಿ ನನ್ನ ಕ್ಷೇತ್ರದಲ್ಲಿನ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿದೆ. ಏನಾದರೂ ತಾತ್ಕಾಲಿಕ ವ್ಯವಸ್ಥೆಯನ್ನು ತಾವು ಮಾಡಬೇಕು.

ಶ್ರೀ ಎಂ.ಪಿ.ಪ್ರಕಾಶ್: ಹೈಕೋರ್ಟಿನಲ್ಲಿ ಈ ಪ್ರಸ್ತಾವನೆ ಇರುವುದರಿಂದ ತೊಂದರೆಯಾಗಿದೆ. ಕಾರ್ಯದರ್ಶಿ ದೈನಂದಿನ ಕೆಲಸಕಾರ್ಯಗಳನ್ನು ನೋಡಿಕೊಳ್ಳುತ್ತಾನೆ. ಆದರೆ ಅಭಿವೃದ್ಧಿ ಕೆಲಸಕಾರ್ಯಗಳಿಗೆ ಅಧ್ಯಕ್ಷರು ಸಹಿ ಮಾಡಿದಿದ್ದರೆ ಆ ಹಣವನ್ನು ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇನ್ನು 2-3 ದಿವಸಗಳಲ್ಲಿ ಆಡಳಿತಾಧಿಕಾರಿಯನ್ನು ನೇಮಕ ಮಾಡುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಹೈಕೋರ್ಟಿನಲ್ಲಿ ಎಂಟುವಾರ ಮಾತ್ರ ಸ್ಟೇ ಇತ್ತು. ನಂತರ ಮುಂದುವರೆದಿಲ್ಲ. ಎಂಟು ವಾರವೆಂದು ಸ್ಪಷ್ಟವಾಗಿ ಕೊಟ್ಟಿದ್ದಾರೆ. ನಿಮ್ಮ ಅಧಿಕಾರಿಗಳು ಇದನ್ನು ನೋಡಿಕೊಳ್ಳುತ್ತಿಲ್ಲ. ಅದು ಇನ್‌ಫೆಕ್ಚುಯಸ್ ಆಗಿದೆ.

ಶ್ರೀ ಎಂ.ಪಿ.ಪ್ರಕಾಶ್: ನನಗೆ ಬಂದಿರುವ ಮಾಹಿತಿ ಪ್ರಕಾರ ಈ ಪ್ರಕರಣ ಹೈಕೋರ್ಟಿನಲ್ಲಿ ಇತ್ಯರ್ಥವಾಗಬೇಕಾಗಿದೆ. ನಾನು ವೆರಿಫೈ ಮಾಡುತ್ತೇನೆ. ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು: ವೆರಿಫೈ ಮಾಡಿ, ಇರಲಿಲ್ಲವೆಂದರೆ ಮಾಡಿಕೊಡಿ. ಮಾನ್ಯ ಅಪ್ಪಚ್ಚು ರಂಜನ್‌ರವರೇ, ಮಾನ್ಯ ಗೃಹ ಮಂತ್ರಿಗಳು ಸಮಯ ಕೇಳಿದ್ದಾರೆ ಸಂಜೆಯೊಳಗೆ ಉತ್ತರ ತರಿಸಿಕೊಡುತ್ತೇವೆಂದು ಹೇಳಿದ್ದಾರೆ. ಶೂನ್ಯವೇಳೆ ಮುಗಿಯಲಿ.

**(ಉ) ಸೇಡಂ ತಾಲ್ಲೂಕಿನ ಅಳ್ಳೊಳ್ಳಿ ಗ್ರಾಮದಲ್ಲಿ ನಡೆದ ಘಟನೆ.**

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಗುಲ್ಬರ್ಗಾ